PW – 1

ದಿನಾಂಕಃ 25.02.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ –

ನನ್ನ ಊರು ಹೊನ್ನಾಳಿ ತಾಲ್ಲೂಕಿನ ಹನುಮಸಾಗರ. ಅಲ್ಲಿಂದ ಶಿವಮೊಗ್ಗ 50 ಕಿ ಮಿೂ ಆಗುತ್ತದೆ. ಅಪಘಾತವಾದ ಕೂಡಲೇ ನ್ಯಾಮತಿಯ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ನಂತರ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋಗಿದ್ದೆ. ಶಿವಮೊಗ್ಗ ಹತ್ತಿರವಾಗುತ್ತದೆ ಎಂದು ಎಲ್ಲರೂ ಅಲ್ಲಿಗೆ ಹೋಗಲು ಹೇಳಿದ್ದರು ಎಂದರೆ ಸರಿ. ನನ್ನ ಬಳಿ ಇರುವ ದಾಖಲೆಗಳನ್ನು ಈಗಾಗಲೇ ಹಾಜರುಪಡಿಸಿದ್ದೇನೆ ಪುನಃ ಹಾಜರುಪಡಿಸಲು ಯಾವುದೇ ದಾಖಲೆಗಳು ಇಲ್ಲ. ನಿಪಿ–4 ಅಂಗನ್ಯೂನತೆ ಪ್ರಮಾಣ ಪತ್ರ ನೀಡಿದ ವೈದ್ಯರು ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ ಎಂದರೆ ಸರಿ. ನಿಪಿ–4 ಮತ್ತು 7 ಎಕ್ಸರೇ ಹೊರತುಪಡಿಸಿ ಬೇರೆ ಎಲ್ಲಾ ದಾಖಲೆಗಳು ಶಿವಮೊಗ್ಗ ಆಸ್ಪತ್ರೆಗೆ ಸಂಬಂಧಿಸಿದ್ದು ಎಂದರೆ ಸರಿ. ಚಿಕಿತ್ಸೆ ಪಡೆದ ಮೆಗ್ಗಾನ್ ಆಸ್ಪತ್ರೆಯಿಂದ ಅಂಗನ್ಯೂನತೆ ಪ್ರಮಾಣ ಪತ್ರ ತರಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅವರು ಕೊಡುವುದಿಲ್ಲ ಎಂದು ಹೇಳಿದ್ದರು ಎಂದು ಉತ್ತರಿಸಿರುತ್ತಾರೆ. ಮೆಗ್ಗಾನ್ ಆಸ್ಪತ್ರೆಗೆ ನಾನು ಅರ್ಜಿ ನೀಡಿದ್ದೆ ಅದಕ್ಕೆ ಹಿಂಬರಹ ಪಡೆದಿರುವುದಿಲ್ಲ. ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಸದರಿ ದಾಖ್ಲೆಯನ್ನು ತರಿಸಬಹುದು ಎಂದರೆ ಸರಿ. ನಾನು ಎಲ್ಲಾ ದಾಖ್ಲೆಗಳಿಗೆ ಸಹಿ ಮಾಡುತ್ತೇನೆ. ನಿಪಿ–4 ರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಎಸ್ ಎಸ್ ಆಸ್ಪತ್ರೆಯಲ್ಲಿ ಎಕ್ಸರೇ ಮಾಡಿಸಲು 15 ರಿಂದ 20 ಸಾವಿರ ಕಟ್ಟಿದ್ದೆ. ಸದರಿ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನಗೆ ಯಾವುದೇ ರೀತಿಯ ಅಂಗನ್ಯೂನತೆ ಇರುವುದಿಲ್ಲ ವೈದ್ಯರ ಜೊತೆ ಶಾಮೀಲಾಗಿ ಸುಳ್ಳು ಅಂಗನೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಜವಾಗಲೂ ಅಂಗನ್ಯೂನತೆ ಇದಿದ್ದರೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲೇ ಪ್ರಮಾಣ ಪತ್ರ ತಂದು ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿಯು ತರುತ್ತೇನೆ ಎಂದು ಉತ್ತರಿಸಿರುತ್ತಾರೆ. ಮೆಗ್ಗಾನ್ ಆಸ್ಪತ್ರೆಯಲ್ಲಿ ಫ್ರೀಯಾಗಿ ಚಿಕಿತ್ಸೆ ನೀಡಿದ್ದಾರೆ ಯಾವುದೇ ಹಣ ಖರ್ಚಾಗಿಲ್ಲ ಎಂದರೆ ಸಾಕ್ಷಿಯು ಹೂರಗಡೆಯಿಂದ ಮಡಿಸನ್ ತಂದಿದ್ದೇನೆ ಎಂದು ಉತ್ತರಿಸಿರುತ್ತಾರೆ. ಸದರಿ ಔಷಧಿಗಳನ್ನು ತಂದಿರುವ ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಸಂಪೂರ್ಣ ಗುಣಮುಖನಾಗಿದ್ದರಿಂದ ಪುನಃ ಅಲ್ಲಿ ಚಿಕಿತ್ಸೇ ಪಡೆಯಲು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖ್ಲೆಗಳ ಪ್ರಕಾರ ತಾಃ 14.3.2024 ರಂದು ಕೊನೆ ಬಾರಿ ಅಲ್ಲಿಗೆ ಚಿಕಿತ್ಸೆಗೆ ಹೋಗಿದ್ದೆ ಎಂದರೆ ಸರಿ. ನಿಪಿ–4 ನ್ನು

ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ದಿನಾಂಕ ನಮೂದು ಮಾಡಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ಆದಾರ್ ಕಾರ್ಡ ಪ್ರಕಾರ ನನ್ನ ಜನ್ಮ ತಾಃ 1.6.1979 ಎಂದರೆ ಸರಿ. ಸದರಿ ಜನ್ಮ ದಿನಾಂಕ ಸರಿಯಾಗಿದೆ. ಅಪಘಾತದ ಸಮಯದಲ್ಲಿ ನಾನು ಮೋಟಾರ್ ಸೈಕಲ್ ಚಾಲನೆ ಮಾಡುತ್ತಿರಿಲ್ಲ ನಾನು ಹಿಂಬದಿ ಕುಳಿತಿದ್ದೆ. ಮೋಟಾರ್ ಸೈಕಲ್ ಚಾಲಕ ನವೀನನ ತಪ್ಪಿನಿಂದ ಅಪಘಾತವಾಗಿದೆ ಕಾರು ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಕಾರು ಚಾಲಕನ ತಪ್ಪಿನಿಂದ ಅಪಘಾತವಾಗಿದ್ದಲ್ಲಿ ಅದೇ ದಿನ ಪೊಲೀಸರಿಗೆ ದೂರು ನೀಡುತ್ತಿದ್ದೀರಿ ಎಂದರೆ ಸಾಕ್ಷಿಯು ನೀಡಲಾಗಿದೆ ಎಂದು ಉತ್ತರಿಸಿರುತ್ತಾರೆ. ಆ ದಿನದ ದೂರನ್ನು ಹಾಜರುಪಡಿಸಲು ತೊಂದರೆ ಇಲ್ಲ. 2 ದಿನಗಳ ನಂತರ ನವೀನ್ ಕಡೆಯಿಂದ ಸುಳ್ಳು ದೂರನ್ನು ಕೊಡಿಸಿದ್ದೇವೆ ಎಂದರೆ ಸರಿಯಲ್ಲ. 2 ದಿನ ತಡವಾಗಿ ದೂರು ನೀಡಲು ನಮೂದಿಸಿದ ಕಾರಣ ಸುಳ್ಳು ಎಂದರೆ ಸರಿಯಲ್ಲ. ಅಪಘಾತಕಿಂತ ಮುಂಚೆ ಮೇಸನ್ ಕೆಲಸದಿಂದ ತಿಂಗಳಿಗೆ 30 ಸಾವಿರ ದುಡಿಯುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದುಡಿಮೆ ತೋರಿಸಲು ಯಾವುದೇ ದಾಖ್ಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಮೆಗ್ಗಾನ್ ಆಸ್ಪತ್ರೆಯಲ್ಲಿ ಸುಮಾರು 4 ಲಕ್ಷ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ 4 ಲಕ್ಷದ ಬಿಲ್ಲನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 4 ಲಕ್ಷ ಖರ್ಚು ಮಾಡಿರುವುದಕ್ಕೆ ಆಸ್ಪತ್ರೆಯಿಂದ ಬಿಲ್ ನೀಡಿಲ್ಲ ಎಂದರೆ ಸಾಕ್ಷಿಯು ಹೊರಗಿಂದ ಔಷಧಿ ತರಿಸಿದ್ದೇನೆ ಎಂದು ಉತ್ತರಿಸಿರುತ್ತಾರೆ. ಹೊರಗಿನಿಂದ ಔಷಧಿ ತರಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅನುಕೂಲಕ್ಕಾಗಿ ವೈದ್ಯಕೀಯ ದಾಖ್ಲೆ ಮತ್ತು ಪೊಲೀಸರ ದಾಖಲೆಗಳನ್ನು ಸೃಷ್ಟಿ ಮಾಡಿರುವುದರಿಂದ ವಿಮಾ ಕಂಪನಿಯವರು ಪರಿಹಾರ ನೀಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ